

# ಆಷಾಢದಲ್ಲಿ ಶುಭಕಾರ್ಯ

ಆಷಾಢದ ರೊಯ್ಯನೆ ಬೀಸುವ ಗಾಳಿ, ಜಿಟಿಜಿಟಿ ಮಳೆ, ನಿದ್ರಿಸಲೆಂದೇ ತಯಾರಿಸಲ್ಪಟ್ಟಂತಿರುವ ವಾತಾವರಣ ಮನಸ್ಸನ್ನು ಹಾದಿಗಿಂತಲೂ ಹಾಸಿಗೆಯತ್ತಲೇ ಸೆಳೆಯುತ್ತವೆ. ಹಬ್ಬಗಳ ಸಾಲನ್ನೇ ಹೊಂದಿರುವ ಶ್ರಾವಣ, ಭಾದ್ರಪದಗಳ ಮುಂಚಿನ ಮಾಸವಾದ ಇದು ಹಬ್ಬದ ಸೋಂಕನ್ನೂ ಹೊಂದಿರದ ಮಾಸ.

ಹೌದು, ಆಷಾಢಮಾಸದಲ್ಲಿ ಶುಭಕಾರ್ಯಗಳನ್ನು ಮಾಡುವಂತಿಲ್ಲ. ಮದುವೆ ಮುಂಜಿಗಳನ್ನು ನೆರವೇರಿಸುವಂತಿಲ್ಲ. ಅಲ್ಲದೆ, ಮದುವೆಯಾದ ವರ್ಷದಲ್ಲಿ ಬರುವಂತಹ ಆಷಾಢಮಾಸದಲ್ಲಿ ಅತ್ತೆ ಸೊಸೆ ಒಂದೇ ಹೊಸ್ತಿಲನ್ನು ದಾಟಬಾರದು ಎಂಬ ಶಾಸ್ತ್ರವಿದೆ. ಅಲ್ಲದೆ, ಅತ್ತೆ ಅಳಿಯನೂ ದಾಟಬಾರದೆಂಬ ಅಡಿಷನಲ್ ನಿಬಂಧನೆಯೂ ಸೇರಿದೆ. ನವದಂಪತಿಗಳು ಪರಸ್ಪರ ಜೊತೆಗಿರಲು ಹಾತೊರೆಯುತ್ತಿರುವಾಗ ಈ ನಿರ್ಬಂಧ ಏನೇನೂ ಸರಿಯಲ್ಲ ಎಂದು ನವವಿವಾಹಿತರೆಲ್ಲರಿಗೂ ಅನ್ನಿಸಿದ್ದರೆ ಅಚ್ಚರಿಯೇನಲ್ಲ? ದೂರ ಇರಬೇಕಂತೆ, ದೂರ...? ಎಂದು ಗೊಣಗಿ, ಕಣ್ಣಂಚಿನಲ್ಲಿ ನೀರು ತುಂಬಿಕೊಂಡ ದಂಪತಿಗಳೆನಿತೋ... ಹಿರಿಯರಿಗೆ ಮನದಲ್ಲೇ ಶಾಪ ಹಾಕಿದವರ ಸಂಖ್ಯೆಯೂ ಕಡಿಮೆಯೇನಲ್ಲ. ಹೀಗೆ ನವೋಲ್ಲಾಸದ ಹಕ್ಕಿಗಳಾಗಿ ಹಾರುತ್ತಿರುವ ದಂಪತಿಗಳನ್ನು ದೂರೀಕರಿಸುವ ಅಗತ್ಯವಿದೆಯೇ? ಆಷಾಢವೆಂಬುದು ಅಶುಭದ ಮಾಸವೇ?

'ಮಾಸ ಅಶುಭವಲ್ಲ. ಆದರೆ ಶುಭ ಕಾರ್ಯ ಸಲ್ಲ' ಎನ್ನುತ್ತಾರೆ ಹಿರಿಯರು. ಗಂಡ ಹೆಂಡತಿ ಒಟ್ಟಾಗಿರುವುದನ್ನಂತೂ ಬಿಲ್‌ಕುಲ್ ಒಪ್ಪುವುದಿಲ್ಲ ಅವರು. 'ನಿನ್ಹೆಂಡ್ತಿ, ನಿಮ್ಮಮ್ಮ ಒಂದೇ ಹೊಸ್ತಿಲು ದಾಟಿದರೆ ಅಶುಭ' ಎನ್ನುತ್ತಾ ಹರಿಹಾಯುತ್ತಾರೆ. 'ನಮ್ಮದು ಮಾಡ್ರನ್ ಮನೆ, ಹೊಸ್ತಿಲೇ ಇಲ್ಲ' ಎಂದರೂ ಕೇಳುವುದಿಲ್ಲ!

ಈ ರೀತಿಯ ನಿರ್ಬಂಧ, ವರ್ತನೆಗೆ ಕಾರಣಗಳಿವೆ. ಬನ್ನಿ, ಅಂದಿನ ದಿನಗಳಿಗೇ ಹೋಗಿ ಇವುಗಳ ಹಿನ್ನೆಲೆಗಳನ್ನು ಅರಿಯೋಣ.

ನಮ್ಮ ಪರಂಪರೆಯಲ್ಲಿ ಒಟ್ಟು ಕುಟುಂಬಗಳು ಬಹಳ. ಮೂರರಿಂದ ನಾಲ್ಕು ತಲೆಮಾರುಗಳವರೆಗೆ ಒಂದೇ ಸೂರಿನಡಿಯಲ್ಲಿ ಸೌಹಾರ್ದದಿಂದ ಜೀವನ ಸಾಗಿಸುವುದು ನಮ್ಮ ಪರಂಪರೆಯ ಹೆಮ್ಮೆಪಡುವ ಅಂಶಗಳಲ್ಲಿ ಒಂದು. ಆಗಿನ ಒಟ್ಟು ಕುಟುಂಬದಲ್ಲಿ ಯಾವುದಾದರೂ ಒಳ್ಳೆಯ ಕೆಲಸ (ಮದುವೆ, ಮುಂಜಿ, ನಾಮಕರಣ) ನಡೆದರೆ ಇಡೀ ಕುಟುಂಬವಷ್ಟೇ ಅಲ್ಲದೆ ಇಡೀ ಹಳ್ಳಿಯೇ (ನೆನಪಿರಲಿ, ಅಂದಿನ ದಿನಗಳಲ್ಲಿ ಇಡೀ ಹಳ್ಳಿಗೆ ಎಂಟೋ, ಹತ್ತೋ ಕುಟುಂಬಗಳು ಮಾತ್ರ ಇರುತ್ತಿದ್ದವಷ್ಟೆ) ಭಾಗವಹಿಸುತ್ತಿತ್ತು. ಒಂದು ಮುಂಜಿಯಾದರೆ ಕಡಿಮೆಯೆಂದರೆ ಮೂರು ದಿನಗಳ ಸಂಭ್ರಮ, ಅದರ ತಯಾರಿಗೆ ಅದಕ್ಕೂ ಮುನ್ನ ಒಂದು ವಾರ; ಮದುವೆಯೆಂದರಂತೂ ಒಂದು ವಾರದ ತಯಾರಿ, ಒಂದು ವಾರದ ಮದುವೆ! ಹೀಗಾಗಿ ಇಡೀ ಹಳ್ಳಿಗೆ ಹಳ್ಳಿಯೇ ವಾರದಿಂದ ಹದಿನೈದು ದಿನಗಳವರೆಗೆ ಸಂಭ್ರಮದಲ್ಲಿ ಭಾಗವಹಿಸಿ, ಇಡೀ ಪಕ್ಷದ (15 ದಿನಗಳ) ಕೃಷಿಗೆ ಧಕ್ಕೆಯುಂಟಾಗುತ್ತಿತ್ತು. ಒಂದು ಕುಟುಂಬದ ಸಮಾರಂಬವೇ ಇಷ್ಟು ದಿನಗಳದ್ದಾದರೆ, ಎರಡೋ, ಮೂರೋ ಕುಟುಂಬಗಳಲ್ಲಿ ಸುಕಾರ್ಯಗಳು ನಡೆದಲ್ಲಿ ಇಡೀ ಮಾಸವೇ ಕೃಷಿಗೆ ಧಕ್ಕೆಯಾಗುತ್ತಿತ್ತು.

ಆಷಾಢದಲ್ಲಿ ಬೀಳುವ ಸಣ್ಣ ಮಳೆಯಲ್ಲಿ ಕೃಷಿ ಕಾರ್ಯಗಳಿಗೆ ಪರ್ವಕಾಲ. ಈ ಅವಧಿಯಲ್ಲಿ ಕೃಷಿಯನ್ನೇನಾದರೂ ಕಡೆಗಣಿಸಿದಲ್ಲಿ ಆ ವರ್ಷದ ಬೆಳೆಗೇ ಕತ್ತರಿಯಾಗುತ್ತಿದ್ದಿತು. ಈ ಸಮಯದಲ್ಲಿ ಮದುವೆ, ಮುಂಜಿ, ಇತ್ಯಾದಿಗಳತ್ತ ಗಮನಹರಿಸಿದರೆ ಕೃಷಿಯತ್ತ ಗಮನಹರಿಸುವುದು ಸಾಧ್ಯವಾಗದ ಮಾತಾಗಿದ್ದುದರಿಂದ ಈ ಸಮಯದಲ್ಲಿ ಶುಭಕಾರ್ಯಗಳನ್ನು ಮಾಡಬಾರದೆಂಬ ನಿರ್ಧಾರವನ್ನು ತೆಗೆದುಕೊಳ್ಳಲಾಯಿತು ಹಾಗೂ ನಿರ್ಧಾರ ಕಾಲಕ್ರಮೇಣ ಶಾಸ್ತ್ರದ ರೂಪ ಪಡೆಯಿತು. ಮನೆ ಕಟ್ಟುವುದನ್ನು ಆರಂಭಿಸುವುದು, ಗೃಹಪ್ರವೇಶ, ಇತ್ಯಾದಿ ಕಾರ್ಯಗಳೂ ಕೃಷಿಗೆ ಅಡ್ಡಿಬರುತ್ತಿದ್ದರಿಂದ ಅವನ್ನೂ ನಂತರದ ತಿಂಗಳುಗಳಲ್ಲಿ ಇರಿಸಿಕೊಳ್ಳಲಾಗುತ್ತಿದ್ದಿತು.

ಶುಭಕಾರ್ಯಗಳನ್ನು ನಡೆಸದಿರಲು ಹೇಗೆ ಕೃಷಿ ಕಾರಣವೋ ಅತ್ತೆ–ಸೊಸೆ/ಅತ್ತೆ– ಅಳಿಯ ಒಂದೇ ಹೊಸ್ತಿಲನ್ನು ದಾಟಬಾರದು ಎಂಬುದಕ್ಕೂ ಕೃಷಿಯೇ ಪರೋಕ್ಷವಾಗಿ ಹಿನ್ನೆಲೆಯಾಗಿತ್ತು. ಇದರಲ್ಲಿ ಗಮನಿಸಬೇಕಾದ ಅಂಶವೆಂದರೆ ಅತ್ತೆ–ಸೊಸೆ ಅಥವಾ ಅತ್ತೆ–ಅಳಿಯನನ್ನು ದೂರವಿರಿಸುವುದು ಇದರ ಮೂಲ ಉದ್ದೇಶವಲ್ಲ. ಗಂಡ– ಹೆಂಡತಿಯರನ್ನು ದೂರ ಇರಿಸುವುದೇ ಇದರ ಗುರಿ. ನವವಿವಾಹಿತರು ಒಬ್ಬರೊಡನೊಬ್ಬರು ಇರಲು ಬಯಸುವುದು ಸಹಜವೇ. ಮದುವೆಯಾದ ಕೆಲವೇ ತಿಂಗಳುಗಳಲ್ಲಂತೂ ಈ ವಾಂಛೆ ಮತ್ತಷ್ಟು ಗಾಢವಾಗಿರುತ್ತದೆ. ಕೃಷಿಗೆ ಪ್ರಶಸ್ತವಾದ ಆಷಾಢದಲ್ಲಿ ನವವಿವಾಹಿತನು ತನ್ನ ಪತ್ನಿಯನ್ನು ಬಿಟ್ಟಿರಲಾರದೆ ಕೃಷಿಯನ್ನು ಕಡೆಗಣಿಸಿಬಿಟ್ಟರೆ ಇಡೀ ವರ್ಷದ ಕೂಳಿಗೆ ತೊಂದರೆಯಾಗುತ್ತದೆ ಎಂಬುದನ್ನು ಮನಗಂಡು ಹಿರಿಯರು ಅವರಿಬ್ಬರನ್ನೂ ದೂರವಿರಿಸಲು ಈ ಶಾಸ್ತ್ರವನ್ನು ತಂದೊಡ್ಡಿದರು. ಎರಡನೆಯ ವರ್ಷದ ಹೊತ್ತಿಗೆ ಮಡಿಲಲ್ಲೊಂದು ಮಗುವಿರುತ್ತಿತ್ತು; ಅಥವಾ ಕಾಮದ ಕಾವು ತಗ್ಗಿರುತ್ತಿತ್ತು, ಹೀಗಾಗಿ ಕೃಷಿಗೂ, ಸತಿಗೂ ಸಮನಾದ ಪ್ರಾಮುಖ್ಯತೆಯನ್ನು ನೀಡಲು ಪತಿಗೆ ಸಾಧ್ಯವಾಗುತ್ತಿತ್ತು; ಆದ್ದರಿಂದ ಈ ನಿರ್ಬಂಧವನ್ನು ಮೊದಲನೆಯ ವರ್ಷಕ್ಕೆ ಮಾತ್ರ ಸೀಮಿತಗೊಳಿಸಲಾಗಿತ್ತು.

ನಗರ ವಾಸಿಗಳಿಗೆ ಕೃಷಿಯ ಛಾಯೆಯೂ ತಿಳಿಯದ್ದರಿಂದ ಅವರಿಗೆ ಆಷಾಢವೂ ಒಂದೇ, ಪುಷ್ಯವೂ ಒಂದೇ ಆಗಿರುತ್ತದೆ. ಎಲ್ಲಾ ಮಾಸಗಳಂತೆಯೇ ಈ ಮಾಸದಲ್ಲೂ ಅವರ ಯಾಂತ್ರಿಕ ಬದುಕು ಸಾಗಲೇಬೇಕಾದ್ದರಿಂದ ಅವರಿಗೆ ಈ 'ಆಷಾಢವಿರಹ' ಅನಗತ್ಯ. ಹೆಣ್ಣೇ ಗಂಡನಿಂದ ತಾತ್ಕಾಲಿಕವಾಗಿ ದೂರವಿರಲು ಬಯಸಿ, ಅಮ್ಮ ಅಪ್ಪನ ಪ್ರೀತಿಯ ಪೋಷಣೆಗೆ ಹಾತೊರೆದು, ಅದಕ್ಕೆ ಕಾಲಾವಕಾಶವೂ ಇದ್ದರೆ, ಈ 'ಆಷಾಢವಿರಹ' ಅನುಭವಿಸಬಹುದಷ್ಟೆ. ಆದರೆ, ಹಳ್ಳಿಗಳಲ್ಲಿನ ಕೃಷಿಯೇ ಪ್ರಧಾನವಾದ ಕುಟುಂಬಗಳಲ್ಲಿ ಈಗಲೂ ಈ ಪದ್ಧತಿಯನ್ನು ಅನುಸರಿಸುವುದು ಸೂಕ್ತ.

■ ವೈಚಾರಿ